ನೇರಿರುತ್ತದೆ ಕಾಮಗಾರಿಯ ಪ್ರಗತಿಯಲ್ಲಿ ತೀವ್ರ ವಿಳಂಬವಾಗಿದ್ದರಿಂದ ಹಾಗೂ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದ್ದರಿಂದ ಗುತ್ತಿಗೆಯನ್ನು ಡಿಸೆಂಬರ್ 2006ರಲ್ಲಿ ರದ್ದುಪಡಿಸಿ ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಲಾಗಿತ್ತು ಗುತ್ತಿಗೆ ರದ್ದತಿಯನ್ನು ಪ್ರಶ್ನಿಸಿ ಕರ್ನಾಟಕ ಭೂಸೇನಾ ನಿಗಮವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಯಾವುದೇ ಮುಂದಿನ ಕ್ರಮ ಜರುಗಿಸದಂತೆ ಮಾನ್ಯ ಉಚ್ಚ ನ್ಯಾಯಾಲಯವು ಮಧ್ಯಂತರ ಆದೇಶ ನೀಡಿರುತ್ತದೆ ರಿಟ್ ಅರ್ಜಿಯನ್ನು ವಜಾಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ

869(404) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಿದ್ಯುತ್ ಸೌಲಭ್ಯ ಯೋಜನೆಯಡಿಯಲ್ಲಿ ಮಂಜೂರಾದ ಉಪ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ನೀಡುವ ಕಾಮಗಾರಿಗಳ ಬಗ್ಗೆ ಟೆಂಡರ್ ಕರೆಯಲಾಗಿದೆಯೇ,

ಆ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು (ಮಾಹಿತಿ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೆಸ್ಕಾಂ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಮಂಜೂರಾದ 2268 ಉಪ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯವನ್ನು ಕಲ್ಪಿಸುವ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ

ಆ) ಸದರಿ ಟೆಂಡರ್‌ನ ತಾಂತ್ರಿಕ ಮತ್ತು ವಾಣಿಜ್ಯ ಬಿಡ್ಡುಗಳನ್ನು ತೆರೆಯಲಾಗಿದ್ದು, ಟೆಂಡರುಗಳ ಮೌಲ್ಯಮಾಪನವು ಪ್ರಗತಿಯಲ್ಲಿದೆ ಟೆಂಡರ್ ಪ್ರಕ್ರಿಯೆ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಪರಿಗಣಿಸಲಾಗುವುದು

872(903) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಯಾವ ಯಾವ ರಸ್ತೆಗಳ ಅಭಿವೃದ್ಧಿ ನಿರ್ವಹಣೆಯನ್ನು ತೆಗೆದು ಕೊಳ್ಳಲಾಗಿದೆ,

ಆ) ಈ ಕಾಮಗಾರಿಗಳನ್ನು ಯಾವಾಗ ಎಷ್ಟು ಜನ ಗುತ್ತಿಗೆದಾರರಿಗೆ ನೀಡಲಾಗಿದೆ, ಗುತ್ತಿಗೆದಾರರ ಹೆಸರು ವಿವರಗಳನ್ನು ಒದಗಿಸುವುದು,

ಇ) ಈ ಕಾಮಗಾರಿಗಳ ಅಂದಾಜು ಮೊತ್ತವೆಷ್ಟು ಹಾಗೂ ಈ ಪೈಕಿ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಮತ್ತು ಖರ್ಚು ಮಾಡಿರುವ ಹಣದ ಮೊತ್ತವೆಷ್ಟು,

ಈ) ಈ ಕಾಮಗಾರಿಗಳನ್ನು ನೀಡುವಾಗ ವಿಧಿಸುವ ಷರತ್ತುಗಳೇನು ಕಾಮಗಾರಿಯ ನಿರ್ವಹಣೆಯನ್ನು ಮುಕ್ತಾಯಗೊಳಿಸಲು ಎಷ್ಟು ಅವಧಿಯ ಸಮಯಾವಕಾಶವನ್ನು ನೀಡಲಾಗಿದೆ,

ಉ) ಈ ರಸ್ತೆ ಅಭಿವೃದ್ಧಿ / ನಿರ್ವಹಣೆಯ ಕಾಮಗಾರಿಗಳನ್ನು ವಹಿಸಿ ಕೊಂಡಿರುವ ಗುತ್ತಿಗೆದಾರರು ಕಾಮಗಾರಿಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ ಮತ್ತೊಬ್ಬರಿಗೆ ವಹಿಸಿಕೊಟ್ಟಿರುವುದು ನಿಜವೇ,

ಊ) ಹಾಗಿದ್ದಲ್ಲಿ, ನಿಯಮಗಳಲ್ಲಿ ಇದಕ್ಕೆ ಅವಕಾಶವಿದೆಯೇ,

ಋ) ನಿಗಧಿತ ಸಮಯಕ್ಕೆ ಕಾಮಗಾರಿಯನ್ನು ಮುಗಿಸದೇ ಇರುವುದರಿಂದ ಈ ಭಾಗದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಎ) ಹಾಗಿದ್ದಲ್ಲಿ, ಇದಕ್ಕೆ ಕಾರಣರಾದ ಗುತ್ತಿಗೆದಾರರನ್ನು ಕಪ್ಪಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಔರಾದ್ ತಾಲ್ಲೂಕಿನಲ್ಲಿ ಒಟ್ಟು 47 ಕಿಮಿ ರಾಜ್ಯ ಹೆದ್ದಾರಿಯನ್ನು ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ ಈ ರಸ್ತೆಗಳ ವಿವರಗಳು ಕೆಳಗಿನಂತಿವೆ

1) ಕಮಲಾನಗರ–ಗೂನಳ್ಳಿ ರಾಜ್ಯ ಹೆದ್ದಾರಿ–4–15 00 ಕಿಮೀ (ಪ್ಯಾಕೇಜ್–1)
2) ವಾನಮಾರಪಲ್ಲಿ–ರಾಯಚೂರು ರಾಜ್ಯ ಹೆದ್ದಾರಿ–15–32 ಕಿಮೀ (ಪ್ಯಾಕೇಜ್–2)

ಆ) ಬೀದರ್ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿ ನಿರ್ವಹಣೆಯನ್ನು ಎರಡು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಅವುಗಳನ್ನು ಕೆಳಕಂಡ ಗುತ್ತಿಗೆದಾರರಿಗೆ ವಹಿಸಿದೆ

1) ಪ್ಯಾಕೇಜ್–1 – ಮೆ ಜೈಭವಾನಿ ಕನ್‌ಸ್ಟ್ರಕ್ಷನ್ಸ್
2) ಪ್ಯಾಕೇಜ್–2 – ಮೆ ಕೋಟರ್ಕಿ ಕನ್‌ಸ್ಟ್ರಕ್ಷನ್ಸ್

ಇ) ಈ ಕಾಮಗಾರಿಗಳ ಅಂದಾಜು ಮೊತ್ತವು ರೂ 141 00 ಲಕ್ಷಗಳು ಮತ್ತು ಇಲ್ಲಿಯವರೆಗೆ ಖರ್ಚು ಮಾಡಿರುವ ಮೊತ್ತ ರೂ 76 11 ಲಕ್ಷಗಳು

ಈ) ಈ ಕಾಮಗಾರಿಗಳು ಮೂರು ವರ್ಷದ ಅವಧಿಯದ್ದಾಗಿದ್ದು, ಗುತ್ತಿಗೆಯ ಷರತ್ತಿನ ಪ್ರಕಾರ ಗುತ್ತಿಗೆದಾರರು ಮೊದಲನೇ ವರ್ಷದಲ್ಲಿ ಗುತ್ತಿಗೆಯಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ತಿಗೊಳಿಸಬೇಕಾಗಿರುತ್ತದೆ ಮುಂದಿನ ಎರಡು ವರ್ಷಗಳವರೆಗೆ ನಿರ್ವಹಣೆ ಮಾಡಬೇಕಾಗಿರುತ್ತದೆ

ಉ) ಈ ಕಾಮಗಾರಿಗಳನ್ನು ಗುತ್ತಿಗೆದಾರರು ಮತ್ತೊಬ್ಬರಿಗೆ ವಹಿಸಿ ಕೊಟ್ಟಿರುವುದಿಲ್ಲ

ಊ) ಇದಕ್ಕೆ ಗುತ್ತಿಗೆಯ ನಿಯಮದಲ್ಲಿ ಅವಕಾಶ ಇರುವುದಿಲ್ಲ

ಋ) ಬಂದಿದೆ

ಎ) ಗುತ್ತಿಗೆಯ ಕರಾರಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು

873(904) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ (1–1–2006 ರಿಂದ 15–1–2007ರವರೆವಿಗೆ) ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ರಾಜ್ಯ ಮಟ್ಟದ ವಿವಿಧ ದಿನ ಪತ್ರಿಕೆಗಳಿಗೆ ನೀಡಿದ ಜಾಹೀರಾತಿನ ಒಟ್ಟು ಮೊತ್ತವೆಷ್ಟು,

ಆ) ಯಾವ ಯಾವ ಇಲಾಖೆಯ ಪ್ರಗತಿಗೆ ಸಂಬಂಧಪಟ್ಟಂತೆ ಈ ಜಾಹೀರಾತುಗಳನ್ನು ಯಾವ ಯಾವ ಪತ್ರಿಕೆಗಳಿಗೆ ನೀಡಲಾಗಿದೆ ಹಾಗೂ ಈ ಪೈಕಿ ಹೈದ್ರಾಬಾದ್ ಕರ್ನಾಟಕ ಪ್ರದೇಶದಿಂದ ಪ್ರಕಟಗೊಳ್ಳುವ ಪತ್ರಿಕೆಗಳು ಯಾವುವು (ಪತ್ರಿಕೆಗಳ ಹೆಸರು ಹಾಗೂ ಇವುಗಳಿಗೆ ನೀಡಲಾದ ಜಾಹೀರಾತಿನ ಮೊತ್ತದ ವಿವರಗಳನ್ನು ಒದಗಿಸುವುದು),

ಇ) ಸರ್ಕಾರವು ಪತ್ರಿಕೆಗಳಿಗೆ ಜಾಹೀರಾತು ನೀಡುವಾಗ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವುದು ನಿಜವೇ,

ಈ) ಹಾಗಿದ್ದಲ್ಲಿ, ಎಲ್ಲಾ ಪತ್ರಿಕೆಗಳಿಗೂ ಸಮನಾದ ರೀತಿಯಲ್ಲಿ ಜಾಹೀರಾತುಗಳನ್ನು ನೀಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ದಿನಾಂಕ 1–1–2006 ರಿಂದ 15–1–2007ರವರೆಗೆ ರಾಜ್ಯ ಮಟ್ಟದ ದಿನಪತ್ರಿಕೆಗಳಿಗೆ ಬಿಡುಗಡೆ ಮಾಡಲಾದ ಒಟ್ಟು ಜಾಹೀರಾತು ವೆಚ್ಚ ರೂ 4,19,84,380/–